ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

**ಸಂಖ್ಯೆ: ನಿ(ಪ್ರೌ.ಶಿ.)ಕ.ನಾ.ಸೇ.ಖಾ.ಅಧಿ: 01/2011-12** **ದಿನಾಂಕ: 20ನೇ ಮಾರ್ಚ 2012**

## ಸಭಾ ನಡಾವಳಿ

ವಿಷಯ: ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2012ನ್ನು ಜಾರಿಗೊಳಿಸುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಸಿಅಸುಇ 04 ಇಕಾಅ 2012, ದಿನಾಂಕ 01.03.2012.

2. ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ, ದಿನಾಂಕ 12.03.2012, ಮತ್ತು 14.03.2012.

**********

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ 19.03.2012 ರಂದು ಈ ಕಛೇರಿಯಲ್ಲಿ ಒಂದು ದಿನದ ತರಬೇತಿಯನ್ನು ಆಯೋಜಿಸಲಾಗಿತ್ತು, ಈ ತರಬೇತಿಗೆ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗದ ಜಿಲ್ಲೆಗಳ ನೋಡಲ್ ಅಧಿಕಾರಿಗಳು ಮತ್ತು ಕಂಪ್ಯೂಟರ್ ಪರಿಣಿತ ಪ್ರೋಗ್ರಾಮರ್/ ಸಿಬ್ಬಂದಿಗಳು ಹಾಜರಾಗಿದ್ದರು. ಈ ತರಬೇತಿಯ ಕಾರ್ಯಕ್ರಮವನ್ನು ಶ್ರೀಯುತ ಎ. ದೇವಪ್ರಕಾಶ್, ಮಾನ್ಯ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಮತ್ತು ಶ್ರೀಯುತ ಕೆ.ಪಿ. ಹನುಮಂತರಾಯಪ್ಪ, ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ) ಉದ್ಘಾಟಿಸಿ, ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2012ನ್ನು ಜಿಲ್ಲೆ ಮತ್ತು ತಾಲ್ಲೋಕುಗಳಲ್ಲಿ ಜಾರಿಗೊಳಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದರು.

ಸಭೆಯಲ್ಲಿ ಹಾಜರಿದ್ದ ಎಲ್ಲ ನೋಡಲ್ ಅಧಿಕಾರಿಗಳ ಸೂಕ್ತ ಸಲಹೆ, ಅಭಿಪ್ರಾಯಗಳನ್ನು ಸ್ವೀಕರಿಸಿ, ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು ಈ ಕೆಳಕಂಡ ಅಂಶಗಳನ್ನು ಕ್ರೋಢಿಕರಿಸಿ, ಇದರಂತೆ ಅನುಪಾಲನೆ ಮಾಡಲು ಸಭೆಯು ನಿರ್ಣಯಿಸಿತು.

- ಪ್ರಸ್ತುತವಾಗಿ 06 ಸೇವೆಗಳನ್ನು ಜಾರಿಗೊಳಿಸಬೇಕಾಗಿದ್ದು, ಇದರಲ್ಲಿ 03 ಸೇವೆಗಳು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಗೆ ಸಂಬಂಧಿಸಿದಾಗಿದೆ. ಇನ್ನುಳಿದ 03 ಸೇವೆಗಳು ಅಂದರೆ ಹೊಸ ಶಾಲೆಗಳಿಗೆ ನೊಂದಣಿ ನೀಡುವುದು, ಪ್ರಥಮ ಮಾನ್ಯತೆ ಮತ್ತು ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉಪನಿರ್ದೇಶಕರ ಕಛೇರಿ ಮತ್ತು ಆಯುಕ್ತರ ಕಛೇರಿಗೆ ಸಂಬಂಧಿಸಿದಾಗಿರುತ್ತದೆ. ಈ ಎಲ್ಲಾ 06 ಸೇವೆಗಳ ಬಗ್ಗೆ ಸಾರ್ವಜನಿಕರಿಗೆ ನಿರಂತರ ತಿಳುವಳಿಕೆ ಮತ್ತು ಪ್ರಚಾರವನ್ನು ನೀಡತಕ್ಕದ್ದು ಹಾಗೂ ಪ್ರತಿ ಕಛೇರಿಗಳಲ್ಲಿ ಈ ಬಗ್ಗೆ ಸೂಚನಾ ಫಲಕಗಳನ್ನು ತಯಾರಿಸಿ ಪ್ರದರ್ಶಿಸುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.
- ಪ್ರತಿ ಜಿಲ್ಲೆಯಲ್ಲಿ ಸದರಿ ಕಾರ್ಯಕ್ಕೆ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳು ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ 27.03.2012 ರ ಒಳಗೆ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಭೆಯನ್ನು ಆಯೋಜಿಸಿ, ಸದರಿ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ನೀಡಿ, ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2012ನ್ನು ಜಾರಿಗೊಳಿಸುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು.
- ಪ್ರತಿ ತಾಲ್ಲೋಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಛೇರಿಯ ವ್ಯವಸ್ಥಾಪಕರು ಮತ್ತು ಬಿ.ಆರ್.ಸಿ. ಕೇಂದ್ರದಲ್ಲಿರುವ ಪ್ರೋಗ್ರಾಮರ್/ ಡಾಟ ಎಂಟ್ರಿ ಆಪರೇಟರ್ ಒಳಗೊಂಡಂತೆ ಒಂದು ತಂಡವನ್ನು ರಚಿಸಿ, ಕಛೇರಿಯ ಎಲ್ಲ ಸಿಬ್ಬಂದಿಗಳಿಗೆ ತರಬೇತಿಗೊಳಿಸುವುದು ಹಾಗೂ ತಾಲ್ಲೋಕು ಮಟ್ಟದಲ್ಲಿ ಪರಿಣಾಮಕಾರಿಯಾಗಿ ನಾಗರೀಕ ಸೇವೆಗಳ ಸನ್ನದು ಜಾರಿಗೊಳಿಸುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು.
- ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2012ಕ್ಕೆ ಸಂಬಂಧಿಸಿದ ತಂತ್ರಾಂಶ ನಿರ್ವಹಣೆ ಬಗ್ಗೆ ಶ್ರೀಮತಿ ಪದ್ಮಜಾ ಕೌಜಲಗಿ, ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ ರವರು ಮಾಹಿತಿ ನೀಡಿದರು.
- ವೆಬ್‌ಸೈಟ್ ನಿರ್ವಹಣೆ ಮತ್ತು ಅಂತರ್ಜಾಲ ಶೋಧಿಸುವ ಬಗ್ಗೆ ಶ್ರೀಯುತ ಎಂ.ಎಸ್. ಶಂಕರ್ ನಾರಾಯಣ್, ಇ-ಆಡಳಿತ ಘಟಕ ರವರು ಸಭೆಗೆ ಮಾಹಿತಿ ನೀಡಿದರು.

- ಡಾ. ಶಶಿಕಲಾ, ಸದಸ್ಯರು, ಪಾಲಿಸಿ ಪ್ಲಾನಿಂಗ್ ಘಟಕ ಇವರು ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2012 ಕಾಯ್ದೆ ಮತ್ತು ನಿಯಮಗಳ ಬಗ್ಗೆ ಸಭೆಗೆ ಪ್ರಸ್ತುತಿಯನ್ನು ನೀಡಿ ಜಾಗೃತಿ ಮತ್ತು ಅರವು ಮೂಡಿಸಿದರು.
- ಶ್ರೀಯುತ ರಂಗಯ್ಯ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಮತ್ತು ಶ್ರೀಮತಿ ಶಶಿಕಲಾ, ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ ಇವರು ಸಭೆಯಲ್ಲಿ ಉಪಸ್ಥಿತರಿದ್ದು, ನಾಗರೀಕ ಅಧಿನಿಯಮಗಳ ಬಗ್ಗೆ ಮಾಹಿತಿ ನೀಡಿದರು.
- ಶ್ರೀಯುತ ಎಸ್.ಆರ್. ಸವರಿನಾಥನ್, ನೋಡಲ್ ಅಧಿಕಾರಿಗಳು ಇವರು ನಾಗರೀಕ ಸನ್ನದು ಅಧಿನಿಯಮಗಳ ಪ್ರಾಸ್ತಾವಿಕ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ಚರ್ಚಿಸಿ ಸಭೆಗೆ ಮಾಹಿತಿ ನೀಡಿದರು.
- ಈ ಸಭೆಯಲ್ಲಿ ಈ ಕಛೇರಿಯಿಂದ ಹೊರಡಿಸಲಾಗಿದ್ದ 03 ಸುತ್ತೋಲೆಗಳು ಹಾಗೂ ಒಂದು ಕರ್ನಾಟಕ ರಾಜ್ಯ ಪತ್ರ ಸುತ್ತೋಲೆ ವಿತರಿಸಲಾಯಿತು.
- ಸದರಿ ಸಭೆಗೆ ಕೋಲಾರ, ಶಿವಮೊಗ್ಗ, ಉತ್ತರ ಕನ್ನಡ, ಶಿರಸಿ ಮತ್ತು ಕೊಪ್ಪಳ ಜಿಲ್ಲೆಗಳಿಂದ ನೋಡಲ್ ಅಧಿಕಾರಿಗಳಾಗಲಿ ಅಥವಾ ಪ್ರತಿನಿಧಿಯಾಗಲಿ ಉಪನಿರ್ದೇಶಕರು ನಿಯೋಜಿಸಿರುವುದಿಲ್ಲ. ಈ ಬಗ್ಗೆ ಮಾನ್ಯ ಆಯುಕ್ತರು ಗಂಭೀರವಾಗಿ ಪರಿಗಣಿಸಿದ್ದು, ಸದರಿ ಜಿಲ್ಲೆಯ ಉಪನಿರ್ದೇಶಕರು ಕೂಡಲೆ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ನೇಮಿಸಿ ವರದಿಯನ್ನು ನೀಡುವಂತೆ ಮಾನ್ಯ ನಿರ್ದೇಶಕರು ಸೂಚಿಸಿದರು.
- ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯದಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಿ, ಆಯುಕ್ತಾಲಯದ ವ್ಯಾಪ್ತಿಗೆ ಬರುವ ಜಿಲ್ಲೆಗಳನ್ನು ಮೇಲುಸ್ತುವಾರಿ ವಹಿಸುವಂತೆ ತಿಳಿಸಲಾಯಿತು.
- ಈ ಸಭೆಯಲ್ಲಿ ಹಾಜರಿದ್ದ ಜಿಲ್ಲಾ ನೋಡಲ್ ಅಧಿಕಾರಿಗಳು, ಉಪನಿರ್ದೇಶಕರ ಮತ್ತು ಬಿ.ಇ.ಓ ಕಛೇರಿಯಲ್ಲಿ ಸೇವೆಗಳ ನಿರ್ವಹಣೆ ಮಾಡಲು ಯುಸರ್ ಐ.ಡಿ. ಮತ್ತು ಪಾಸ್‌ವರ್ಡ್‌ನ್ನು ದಿನಾಂಕ 29.03.2012 ರಂದು ಪೂರ್ವಾಹ್ನ 10-00 ಗಂಟೆಗೆ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, 4ನೇ ಮಹಡಿ, ಬೆಂಗಳೂರು. ಇಲ್ಲಿ ನಡೆಯುವ ತರಭೇತಿಗೆ ಹಾಜರಾಗಿ ಪಡೆಯುವುದು.

ಸದರಿ ಸಭೆಯಲ್ಲಿ ತೀರ್ಮಾನಿಸಿದ ಎಲ್ಲಾ ಅಂಶಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವುದು.

(ಎ. ದೇವಪ್ರಕಾಶ್)
ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

ರವರಿಗೆ

1. ಅಪರ ಆಯುಕ್ತರು, ಸಾ.ಶಿ ಇಲಾಖೆ, ದಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯ, ತಮ್ಮ ಆಯುಕ್ತಾಲಯದಲ್ಲಿ ಒಬ್ಬ ನೊಡಲ್ ಅಧಿಕಾರಿಯನ್ನು ನೇಮಿಸಿ, ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮವಹಿಸುವುದು.
2. ಅಪರ ಆಯುಕ್ತರು, ಆಡಳಿತ, ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು, ಮಾಹಿತಿಗಾಗಿ
3. ನಿರ್ದೇಶಕರು, ಪ್ರಾಥಮಿಕ, ಪ್ರೌಢ ಶಿಕ್ಷಣ, ಡಿ.ಎಸ್.ಇ.ಆರ್.ಟಿ. ಸಾ.ಶಿ.ಇಲಾಖೆ, ಬೆಂಗಳೂರು. ಸೂಕ್ತ ಕ್ರಮಕ್ಕಾಗಿ
4. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ, ಬೆಂಗಳೂರು. ಸೂಕ್ತ ಕ್ರಮಕ್ಕಾಗಿ
5. ಜಂಟಿ ನಿರ್ದೇಶಕರು, ಬೆಂಗಳೂರು ಮತ್ತು ಮೈಸೂರು ವಿಭಾಗ, ಸೂಕ್ತ ಕ್ರಮಕ್ಕಾಗಿ
6. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ. ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗ ಸೂಕ್ತ ಕ್ರಮಕ್ಕಾಗಿ
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ. ಸೂಕ್ತ ಕ್ರಮಕ್ಕಾಗಿ
8. ಶ್ರೀಯುತ ಎಸ್ ಆರ್ ಸವರಿನಾಥನ್, ನೊಡಲ್ ಅಧಿಕಾರಿ ಹಾಗೂ ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ. ಆಯುಕ್ತರ ಕಛೇರಿ, ಬೆಂಗಳೂರು.
9. ಕಛೇರಿ ಪ್ರತಿ.

ಪ್ರತಿಗಳು

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ರವರ ಆಪ್ತಕಾರ್ಯದರ್ಶಿಗಳು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಇವರ ಆಪ್ತ ಕಾರ್ಯದರ್ಶಿಗಳು, ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.